ಓ.ಎಸ್.ನಂಃ 5/2021
ಪಿ.ಡಬ್ಲ್ಯೂಃ 1

**ದಿನಾಂಕಃ 19-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- 1, 2, 6, 10, 11 ಮತ್ತು 13 ಪ್ರತಿವಾದಿ ಪರಃ ಶ್ರೀ ಜಿ.ಎನ್.ಕೆ.ಜಿ. ವಕೀಲರಿಂದಃ-**

ನನ್ನ ತಾಯಿ ಜಮ್ಮಿದಾ ಬಾನು. ನನ್ನ ತಾಯಿ ಚಿಕ್ಕಮಗಳೂರಿನ ಉಪ್ಪಳ್ಳಿಯಲ್ಲಿ ಇದ್ದಾರೆ. ನನ್ನ ತಾಯಿ ಆರೋಗವಾಗಿ ಇದ್ದಾರೆ ಎಂದರೆ ಸಾಕ್ಷಿ ಅವರಿಗೆ ಕಣ್ಣು ಕಾಣುವುದಿಲ್ಲ ಮತ್ತು ವಿಪರೀತ ಮದುಮೇಹ ಕಾಯಿಲೆಯಿಂದ ಬಳಲುತ್ತಿದ್ದಾರೆ ಎನ್ನುತ್ತಾರೆ. ಈ ದಾವೆಯನ್ನ ನನ್ನ ಮುತ್ತಜ್ಜನ ಆಸ್ತಿಯಲ್ಲಿ ಹಿಸ್ಸೆ ಕೋರಿ ಹೂಡಲಾಗಿದೆ. ನನ್ನ ಮುತ್ತಜ್ಜನ ಹೆಸರು ಶೇಕ್ ಮೊಹಿದ್ದೀನ್ ಸಾಬ್. ಸದರಿಯವರು ನನ್ನ ಮುತ್ತಜ್ಜ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಸದರಿಯವರ ಮರಣ ಪ್ರಮಾಣ ಪತ್ರದಲ್ಲಿ ನನ್ನ ಅಜ್ಜ ಶೇಕ್ ಮಹಮದ್ ಗೌಸ್ ಇವರ ಹೆಸರು ನಮೂದಾಗಿದೆ ಎನ್ನುತ್ತಾರೆ. ನಿಮ್ಮ ಮುತ್ತಜ್ಜ ಶೇಕ್ ಮೊಹಿದ್ದೀನ್ ಸಾಬ್ ಇವರಿಗೆ ಆಸ್ತಿ ಇತ್ತು ಎಂದು ತೋರಿಸಲು ನಾಯಾಲಯದ ಮುಂದೆ ಏನು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಆರ್.ಟಿ.ಸಿ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ನಾನು ಹಾಜರು ಮಾಡಿರುವ ಕಂದಾಯ ದಾಖಲೆಗಳು ನನ್ನ ಅಜ್ಜ ಮಹಮ್ಮದ್ ಗೌಸ್ ಇವರ ಹೆಸರಿನಲ್ಲಿ ಇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅಜ್ಜನಿಗೆ ಅವರ ತಂದೆಯಿಂದ ಆಸ್ತಿ ಬಂದಿವೆ ಎನ್ನುತ್ತಾರೆ. ನನ್ನ ಸೋದರಮಾವಂದಿರು ಮತ್ತು ನನ್ನ ತಾಯಿಯ ಸಹೋದರಿಯರ ನಡುವೆ ಆಗಿರುವ ವಿಭಾಗ ಪತ್ರವನ್ನ ನೋಡಿದ್ದೇನೆ. ಸದರಿ ವಿಭಾಗವಾಗುವ ಪೂರ್ವದಲ್ಲಿ ನನ್ನ ತಾಯಿ ಮತ್ತು ಅವರ ಸಹೋದರಿಯರ ವಿವಾಹ ಆಗಿತ್ತಾ ಎಂದರೆ ಸರಿ. ನನ್ನ ತಾಯಿ ಮತ್ತು ಅವರ ಸಹೋದರಿಯರನ್ನ ಅವರ ಅಜ್ಜ ಉತ್ತಮ ಆರ್ಥಿಕ ವ್ಯವಸ್ಥೆ ಇರುವ ಕಡೆ ವಿವಾಹ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ನನ್ನ ತಂದೆ ವಿವಾಹ ಕಾಲದಲ್ಲಿ

ಅಟೆಂಡರ್ ಆಗಿದ್ದರು ಎನ್ನುತ್ತಾರೆ. ನನ್ನ ಅಜ್ಜನ ಹಿಸ್ಸೆಯನ್ನ ನನ್ನ ತಾಯಿ ಮತ್ತು ಅವರ ಸಹೋದರಿಯರಿಗೆ ಈ ಹಿಂದೆ ಆಗಿರುವ ವಿಭಾಗ ಪತ್ರದಲ್ಲಿ ಬಿಟ್ಟುಕೊಡಲಾಗಿದೆ ಎಂದರೆ ಸಾಕ್ಷಿ ನನ್ನ ಅಜ್ಜನ ಹೆಸರಿಗೆ 2 ಎಕರೆ ಆಸ್ತಿಯನ್ನ ಇಟ್ಟಿದ್ದರು ಸದರಿ ಆಸ್ತಿಯನ್ನ ಅವರ 4 ಜನ ಹೆಣ್ಣು ಮಕ್ಕಳಿಗೆ ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದರು ಎನ್ನುತ್ತಾರೆ. ಈ ವಿಚಾರ ನನಗೆ ವಿಭಾಗ ಪತ್ರವನ್ನ ಓದಿದಾಗ ತಿಳಿಯಿತು. ಸದರಿ ವಿಭಾಗ ಪತ್ರವನ್ನ ನಾನು ಈ ದಾವೆ ಹೂಡುವ ಪೂರ್ವದಲ್ಲಿಯೇ ಓದಿದ್ದೇನೆ. ಸಾಕ್ಷಿ ಮುಂದುವರಿದು ನನ್ನ ಅಜ್ಜ ತೀರಿಕೊಂಡ ನಂತರ ವಿಭಾಗ ಪತ್ರ ನನಗೆ ಸಿಕ್ಕಿದೆ ಆಗ ಓದಿದ್ದೇನೆ ಎನ್ನುತ್ತಾರೆ. ಸದರಿ ವಿಭಾಗ ಪತ್ರ ನಿಪಿ-3 ರಲ್ಲ ಇದೆ ಎಂದರೆ ಸರಿ. ಸದರಿ ವಿಭಾಗ ಪತ್ರ ದಿಃ16.07.2007 ರಂದು ಆಗಿದೆ ಎಂದರೆ ಸರಿ. ನನ್ನ ಅಜ್ಜ ಜೀವಂತ ಇದ್ದ ಕಾಲಕ್ಕೆ ಅವರ ಹೆಣ್ಣು ಮಕ್ಕಳೆಲ್ಲಾ ಇವರು ಮನೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ಅಜ್ಜ ಮತ್ತು ಅವರ ಹೆಣ್ಣು ಮಕ್ಕಳ ನಡುವೆ ಮಾತುಕತೆ ಇರಲಿಲ್ಲವಾ ಎಂದರೆ ಸಾಕ್ಷಿ ಅವರು ಅನ್ಯೂನ್ಯವಾಗಿದ್ದರು ಆದರೆ ನನ್ನ ಸೋದರ ಮಾವಂದಿರು ಅವರ ಸಹೋದರಿಯರನ್ನ ಮಾತನಾಡುತ್ತಿರಲಿಲ್ಲ ಮತ್ತು ಅವರನ್ನ ಯಾವುದೇ ಸಂದರ್ಭದಲ್ಲಿ ಕರೆಯುತ್ತಿರಲಿಲ್ಲ ಎನ್ನುತ್ತಾರೆ. ಹಾಲಿ ನನಗೆ 31 ವರ್ಷ ವಯಸ್ಸು. ನಿಪಿ-3 ರ ವಿಭಾಗ ಪತ್ರವಾದಾಗ ನಾನು ಅಪ್ರಾಪ್ತ ವಯಸ್ಕನಾಗಿದ್ದೆ. ವಿಭಾಗ ಪತ್ರದ ಸಂಬಂಧ ನನ್ನ ಅಜ್ಜ ನನ್ನ ತಾಯಿಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಪೂರ್ವದಲ್ಲಿ ವಾದಿ ತನಗೆ ಬರಬೇಕಾದ ಭಾಗವನ್ನ ನಿಪಿ-3 ರ ಪ್ರಕಾರದಲ್ಲಿ ಕೇಳಿದ್ದಾರೆ. ನನ್ನ ತಾಯಿ ಪ್ರತಿವಾದಿಗಳ ಬಳಿ ಬಾಯಿ ಮಾತಿನಲ್ಲಿ ಹಿಸ್ಸೆ ಕೇಳಿದ್ದಾರೆ. ಯಾವ ದಿನಾಂಕದಂದು ಆ ರೀತಿ ಹಿಸ್ಸೆ ಕೇಳಿದ್ದಾರೆ ಎಂದರೆ ಸಾಕ್ಷಿ ನಿರ್ದಿಷ್ಟ ದಿನಾಂಕ ನೆನಪಿಲ್ಲ ಆದರೆ ನನ್ನ ಅಜ್ಜ ತೀರುವ ಮೊದಲು ಮತ್ತು ನಂತರದಲ್ಲಿ ಹಿಸ್ಸೆ ಕೇಳಿದ್ದಾರೆ ಎನ್ನುತ್ತಾರೆ. ನನ್ನ ಅಜ್ಜ 2018 ರಲ್ಲಿ ತೀರಿಕೊಂಡಿರುತ್ತಾರೆ.

ಓ.ಎಸ್.ನಂಃ 5/2021
ಪಿ.ಡಬ್ಲ್ಯೂಃ 1

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
**ಓಃಹೇಃಕೇಃಸಃಇಃವಃಒಃ**

**ಸಹಿ/-**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.**

ಎಸ್ಆರ್ಃ